ದಿನಾಂಕ: **29.10.2018** ರಂದು ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ನಡೆದ ವೀಡಿಯೊ ಸಂವಾದದ ಪ್ರಗತಿ ಪರಿಶೀಲನಾ ನಡವಳಿಗಳು.

*********

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರು ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾನ್ಯ ಸಚಿವರು. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರಿಗೆ ಇಲಾಖಾ ಪರವಾಗಿ ಸ್ವಾಗತವನ್ನು ಕೋರಿದರು. ಪ್ರಧಾನ ಕಾರ್ಯದರ್ಶಿಗಳು ಸಭೆಯನ್ನುದ್ದೇಶಿಸಿ, ಇಲಾಖೆಯ ಅನುಷ್ಠಾನಗೊಳಿಸುತ್ತಿರುವ ಪ್ರತಿಯೊಂದು ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತಷ್ಟು ಪರಿಣಾಮಕಾರಿಯಾಗಿ ವೈಯಕ್ತಿಕವಾಗಿ ತೊಡಗಿಸಿಕೊಂಡು ಮಾನ್ಯ ಸಚಿವರೊಂದಿಗೆ ರಾಜ್ಯಮಟ್ಟದ ಅಧಿಕಾರಿಗಳನ್ನು ಒಳಗೊಂಡಂತೆ ಎಲ್ಲರೂ ಕೈ ಜೋಡಿಸಬೇಕೆಂದು ಕೋರಿದರು. ಮಾನ್ಯ ಸಚಿವರು ವಿಷಯಸೂಚಿಯನುಸಾರ ಪರಿಶೀಲನೆ ನಡೆಸಿ ಕೊಡಲು ಮನವಿ ಮಾಡಿದರು.

ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಮೊದಲಿಗೆ ಸಭೆಯನ್ನುದ್ದೇಶಿಸಿ ಮಾತನಾಡಿ, ಕಳೆದ ಸಭೆಯಲ್ಲಿ ಕೈಗೊಂಡ ನಿರ್ಣಯಗಳು ಫಲಪ್ರದವಾಗಿ ಕಾರ್ಯರೂಪಕ್ಕೆ ಬಂದಲ್ಲಿ ಮಾತ್ರ ಇಂತಹ ಪರಿಶೀಲನಾ ಸಭೆಗಳು ಉಪಯುಕ್ತವಾಗುತ್ತವೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ವಿಷಯಸೂಚಿ ಅನುಸಾರ ಎಲ್ಲಾ ಅಂಶಗಳ ಬಗ್ಗೆ ಕೂಲಂಕಷ ಪರಿಶೀಲನೆ ನಡೆಸಿ ಈ ಕೆಳಕಂಡ ಸೂಚನೆಗಳನ್ನು ನೀಡಿದರು.

<u>ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ</u> :

1. ದಕ್ಷಿಣ ಕನ್ನಡ, ಕೊಡಗು, ಉತ್ತರ ಕನ್ನಡ, ಬೀದರ್, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ವಿಭಾಗ, ಕಲಬುರ್ಗಿ, ಧಾರವಾಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಪ್ರಗತಿ ಅತ್ಯಂತ ಕಡಿಮೆಯಿದ್ದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಆಗಿಂದ್ದಾಗ್ಗೆ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳನ್ನು ಖುದ್ದು ಪರಿಶೀಲಿಸಿ ಹೆಚ್ಚಿನ ಪ್ರಗತಿ ಸಾಧಿಸಲು ಕ್ರಮ ಕೈಗೊಳ್ಳುವುದು.
2. ಪ್ರತಿ ದಿನ ಸದರಿ ಯೋಜನೆಯಡಿ ಸಾಧಿಸಲಾದ ಆರ್ಥಿಕ ಪ್ರಗತಿ ವಿವರಗಳನ್ನು <u>IMIS</u> ತಂತ್ರಾಂಶದಲ್ಲಿ ಅಳವಡಿಸಿರುವ ಬಗ್ಗೆ ಪರಿಶೀಲಿಸುವುದು.

3. ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯಡಿ ಕಳೆದ ನಾಲ್ಕೈದು ವರ್ಷಗಳ ಮುಂದುವರೆದ ಕಾಮಗಾರಿಗಳು ಇದ್ದು, ಆರಂಭಿಕ ಶಿಲ್ಕು ರೂ. 647.61 ಕೋಟಿ ಒಳಗೊಂಡಂತೆ ಯೋಜನೆಯಡಿ ಅನುದಾನದ ಲಭ್ಯತೆಯಿದ್ದರೂ ವೆಚ್ಚವನ್ನು ಭರಿಸಿ ಪ್ರಗತಿ ಸಾಧಿಸದಿರುವ ಬಗ್ಗೆ ತೀವ್ರ ಆಕ್ಷೇಪಣೆಯನ್ನು ವ್ಯಕ್ತಪಡಿಸಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಬಗ್ಗೆ ಪರಿಶೀಲನೆ ನಡೆಸಿ ಮುಂದಿನ ಸಭೆಯ ವೇಳೆಗೆ ಕೈಗೊಂಡ ಕ್ರಮದ ಬಗ್ಗೆ ವರದಿ ನೀಡುವುದು.

**ಶುದ್ಧ ಕುಡಿಯುವ ನೀರಿನ ಘಟಕಗಳು:**

4. ಸದರಿ ಯೋಜನೆಯಡಿ ಕಳೆದ ಬಾರಿಯ ಪ್ರಗತಿ ಪರಿಶೀಲನಾ ಸಭೆಗೆ ಒದಗಿಸಿದ ಮಾಹಿತಿಗೂ ಪ್ರಸ್ತುತ ಸಭೆಗೆ ಒದಗಿಸಿರುವ ಮಾಹಿತಿಗೂ ಪರಿಣಾಮಕಾರಿಯಾದ ಪ್ರಗತಿ ಕಂಡು ಬರುತ್ತಿಲ್ಲವೆಂಬುದನ್ನು ಗಮನಿಸಿ, ಹೆಚ್ಚಿನ ಪ್ರಗತಿ ಸಾಧಿಸುವಲ್ಲಿ ಸೂಕ್ತ ಕ್ರಮವಹಿಸುವುದು.

5. ಕೆಲವು ಜಿಲ್ಲೆಗಳಲ್ಲಿ ಮಂಜೂರಾದ ಶುದ್ಧ ಕುಡಿಯುವ ನೀರು ಘಟಕಗಳ ಸಂಖ್ಯೆಗೂ, ಅಳವಡಿಸಿರುವ ಘಟಕಗಳ ಸಂಖ್ಯೆಗೂ ಹಾಗೂ ಕಾರ್ಯಾರಂಭ ಮಾಡಲಾದ ಘಟಕಗಳ ಸಂಖ್ಯೆಗೂ ಬಹಳಷ್ಟು ವ್ಯತ್ಯಾಸ ಕಂಡು ಬರುತ್ತಿದ್ದು ಕೂಡಲೇ ಸದರಿ ವಿಷಯವನ್ನು ಪರಿಶೀಲಿಸಿ ಸರಿಪಡಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

6. ಘಟಕಗಳ ಅಳವಡಿಕೆಗೆ ಕಾರ್ಯಾದೇಶ ನೀಡಲಾಗಿ ಅನುಷ್ಠಾನ ಪ್ರಾರಂಭಿಸದಿದ್ದಲ್ಲಿ ಅಂಥಹವರ ವಿರುದ್ಧ ಒಂದು ಅಥವಾ ಎರಡು ನೋಟಿಸ್‌ನ್ನು ನೀಡಿ ತರುವಾಯ ಕಾರ್ಯಾದೇಶ ರದ್ದು ಪಡಿಸಿ ಹೊಸದಾಗಿ ಟೆಂಡರ್ ಕರೆಯಲು ತುರ್ತು ಕ್ರಮವಹಿಸುವುದು.

(ಕ್ರಮ: ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)

**ಸ್ವಚ್ಛ ಭಾರತ ಅಭಿಯಾನ:**

7. ಸದರಿ ಯೋಜನೆಯಡಿ ಬೀದರ್ ಜಿಲ್ಲೆಯು ಶೇ. 100 ರಷ್ಟು ಭೌತಿಕ ಗುರಿಯನ್ನು ಸಾಧಿಸಿಲಾಗಿದೆ ಎಂದು ವರದಿಸಿದ್ದು, ಈ ಬಗ್ಗೆ ಪರಿಶೀಲಿಸಿ ಬಯಲು ಬರ್ಹಿದೆಸೆ ಮುಕ್ತ ಜಿಲ್ಲೆಯೆಂದು ಘೋಷಿಸಲು ಕ್ರಮ ಕೈಗೊಳ್ಳುವುದು.

8. ನವೆಂಬರ್–19, 2018 ಅಂತರರಾಷ್ಟ್ರೀಯ ಶೌಚಾಲಯ ದಿನವಾಗಿದ್ದು, ಆ ದಿನವನ್ನು ಅಂತಿಮ ದಿನಾಂಕವೆಂದು ಪರಿಗಣಿಸಿ, ವಿಜಯಪುರ, ರಾಯಚೂರು ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ತ್ವರಿತ ಕ್ರಮ ಕೈಗೊಂಡು ಬಯಲು ಬರ್ಹಿದೆಸೆ ಮುಕ್ತ ಎಂದು ಘೋಷಿಸಲು ಅವಶ್ಯ ಕ್ರಮ ಕೈಗೊಳ್ಳವುದು.

9. ಬಯಲು ಮುಕ್ತ ಬರ್ಹಿದೆಸೆ ಘೋಷಣೆಯಾಗಿದ್ದಾಗ್ಯೂ ಎಲ್ಲಾ ಜಿಲ್ಲೆಗಳಲ್ಲಿ ಹೆಚ್ಚುವರಿ ಶೌಚಾಲಯ ನಿರ್ಮಾಣಕ್ಕಾಗಿ ಸಾರ್ವಜನಿಕರಿಂದ ಬೇಡಿಕೆಯಿದ್ದು, ಸದರಿ ಪ್ರಸ್ತಾವನೆಗೆ ಭಾರತ ಸರ್ಕಾರವು ಅನುಮೋದನೆಯನ್ನು ನೀಡಿರುವ ಹಿನ್ನಲೆಯಲ್ಲಿ ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಯ ಅಧಿಕಾರಿಗಳಿಗೆ ಈ ಕುರಿತು ಅರಿವು ಮೂಡಿಸಲು ಕ್ರಮ.

10. ಯಾವುದೇ ಕಾರಣಕ್ಕೂ ಹೆಚ್ಚುವರಿ ಶೌಚಾಲಯ ನಿರ್ಮಾಣದ ಬೇಡಿಕೆಯನ್ನು ನಿರಾಕರಿಸದೇ, ಬೇಡಿಕೆ ಕುರಿತು ಮಾಹಿತಿ ಸಂಗ್ರಹಿಸಲು ಕ್ರಮ.

11. ಶೌಚಾಲಯ ಬಳಕೆ ಬಗ್ಗೆ ಗ್ರಾಮೀಣ ಜನರಲ್ಲಿ ಹೆಚ್ಚಿನ ರೀತಿಯಲ್ಲಿ ಅರಿವು ಮೂಡಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

12. ಸದರಿ ಯೋಜನೆಯಡಿ ಅನುದಾನದ ಕೊರತೆ ಇಲ್ಲದಿದ್ದರೂ ಕೆಲವು ಜಿಲ್ಲೆಗಳಲ್ಲಿ ಬಿಲ್ಲುಗಳು ಪಾವತಿಗೆ ಬಾಕಿಯಿದ್ದು, ಬಾಕಿ ಬಿಲ್ಲುಗಳ ಪಾವತಿಗೆ ಅಗತ್ಯ ಕ್ರಮ ವಹಿಸುವುದು. ಆರ್ಥಿಕ ಪ್ರಗತಿ ವಿವರಗಳನ್ನು IMIS ನಲ್ಲಿ ತಪ್ಪದೇ ನಮೂದಿಸುವುದು.

<u>ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ (SLWM) :</u>

13. ಪ್ರತಿ ಪರಿಶೀಲನಾ ಸಭೆಯಲ್ಲಿ ಪದೇ ಪದೇ ಪುನರುಚ್ಚರಿಸುತ್ತಾ ಬಂದಿದ್ದರೂ ಸದರಿ ವಿಷಯಧಲ್ಲಿ ನಿರೀಕ್ಷಿತ ಸಾಧನೆಯಾಗಿರುವುದಿಲ್ಲ. ಪ್ರಾರಂಭಿಕ ಹಂತದಲ್ಲಿ ಘನ ತ್ಯಾಜ್ಯ ನಿರ್ವಹಣೆಗೆ ಚಾಲನೆ ನೀಡಬಹುದಾಗಿದ್ದು, ಘನ ತ್ಯಾಜ್ಯವನ್ನು ವಿಂಗಡಿಸುವ ಮತ್ತು ಖರೀದಿದಾರರನ್ನು ಗುರುತಿಸುವ ಕಾರ್ಯವನ್ನು ಆಯಾ ಪ್ರದೇಶದಲ್ಲಿ ಸದರಿ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ NGO / ಸ್ವಯಂ ಸೇವಾ ಸಂಸ್ಥೆಗಳನ್ನು ಉಪಯೋಗಿಸಿಕೊಂಡು ಕಾರ್ಯಾರಂಭ ಮಾಡಲು ಆಧ್ಯತೆ ಮೇರೆಗೆ ಕ್ರಮವಹಿಸುವುದು.

14. ಪ್ರತಿ ತಾಲ್ಲೂಕಿನಲ್ಲಿ ಮೂರರಿಂದ ಐದು ಗ್ರಾಮ ಪಂಚಾಯತಿಗಳನ್ನು ಪ್ರಾರಂಭಿಕ ಹಂತದಲ್ಲಿ ಆಯ್ಕೆ ಮಾಡಿ ಘನ ತ್ಯಾಜ್ಯ ನಿರ್ವಹಣೆಯನ್ನು ಫಲಪ್ರದಗೊಳಿಸುವುದು.

15. IEC ಚಟುವಟಿಕೆಗಳಿಗೆ ಸಾಕಷ್ಟು ಅನುದಾನ ಲಭ್ಯವಿದ್ದು, ಸದರಿ ವಿಷಯದ ಕುರಿತು ಗ್ರಾಮೀಣ ಪ್ರದೇಶದ ಜನತೆಗೆ ಅರಿವು ಮೂಡಿಸಲು ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯತಿ ಮಟ್ಟದಲ್ಲಿ ಜಾಗೃತಿ ಶಿಬಿರಗಳನ್ನು ಆಯೋಜಿಸಲು ಕ್ರಮ.

16. ಘನ ತಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ನವೆಂಬರ್ 2018 ರೊಳಗೆ ಗ್ರಾಮ ಪಂಚಾಯತಿವಾರು ಪ್ರಸ್ತಾವನೆಗಳನ್ನು ಸಲ್ಲಿಸಲು ಜಿಲ್ಲಾ ಪಂಚಾಯತಿ ಮುಖ್ಯ

ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ವೈಯಕ್ತಿಕ ಗಮನ ಹರಿಸಿ ಅಗತ್ಯ ಕ್ರಮ ಕೈಗೊಳ್ಳುವುದು.

(ಕ್ರಮ: ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ :

17. ರಾಮನಗರ, ಬೆಂಗಳೂರು, ಕಲಬುರ್ಗಿ, ಚಿತ್ರದುರ್ಗ, ವಿಜಯಪುರ, ಧಾರವಾಡ, ಉತ್ತರಕನ್ನಡ, ಹಾವೇರಿ, ಮಂಡ್ಯ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಶೇ.41 ಕ್ಕಿಂತ ಕಡಿಮೆ ಮಾನವ ದಿನಗಳನ್ನು ಸೃಜಿಸಲಾಗಿದೆ. ರಾಮನಗರ ಜಿಲ್ಲೆಯಲ್ಲಿ SECURE ಸಮಸ್ಯೆಯಿಂದ ಪ್ರಗತಿ ಕುಂಠಿತವಾಗಿದ್ದರೂ ಹಿಂದಿನ ಸಾಲುಗಳಲ್ಲಿನ ಮಾನವ ದಿನಗಳ ಸೃಜನೆಯನ್ನು ಆಧರಿಸಿ ಪ್ರಸ್ತುತ ಸಾಲಿನ ಗುರಿಯನ್ನು ನಿಗದಿಪಡಿಸಿರುವುದರಿಂದ ಹೆಚ್ಚಿನ ಸಾಧನೆಗೆ ಅವಕಾಶವಿದ್ದು, ಸದರಿ ವಿಷಯದ ಕುರಿತು ಕ್ರಮವಹಿಸುವುದು. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಮಾತನಾಡುತ್ತಾ, ಕಲಬುರ್ಗಿ ಹಾಗೂ ಚಿತ್ರದುರ್ಗ ಜಿಲ್ಲೆಗಳು ರಾಮನಗರ ಜಿಲ್ಲೆಗಿಂತ ಹೆಚ್ಚು ವಿಸ್ತೀರ್ಣ ಹೊಂದಿದ್ದು ಕ್ರಮವಾಗಿ ಒಂಬತ್ತು ಮತ್ತು ಆರು ವಿಧಾನ ಸಭಾ ಕ್ಷೇತ್ರಗಳನ್ನು ಒಳಗೊಂಡಿದ್ದು, ಹೆಚ್ಚಿನ ಮಾನವ ದಿನಗಳ ಪ್ರಗತಿಯನ್ನು ಸಾಧಿಸಲು ಅವಕಾಶವಿದ್ದರೂ ಪ್ರಗತಿಯನ್ನು ಸಾಧಿಸದಿರುವ ಕುರಿತು ಬೇಸರ ವ್ಯಕ್ತಪಡಿಸಿದರು.

ಧಾರವಾಡ, ದಕ್ಷಿಣಕನ್ನಡ, ಉತ್ತರಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಸ್ವತ: ಭೇಟಿ ನೀಡಿ ಪ್ರಗತಿ ಪರಿಶೀಲನೆ ಮಾಡಿ, ಎರಡು ತಿಂಗಳು ಗತಿಸಿದರೂ ಯಾವುದೇ ಧನಾತ್ಮಕ ಪ್ರಗತಿಯಾಗದೇ ಇರುವ ಕುರಿತು ಅತೃಪ್ತಿ ವ್ಯಕ್ತಪಡಿಸಿದರು. ಉತ್ತರಕನ್ನಡ ಜಿಲ್ಲೆಯಲ್ಲಿ ವೆಂಟೆಡ್ ಡ್ಯಾಂಗಳ ನಿರ್ಮಾಣಕ್ಕೆ ವಿಫುಲ ಅವಕಾಶವಿದ್ದು, ಅದನ್ನು ಉಪಯೋಗಿಸಿಕೊಳ್ಳಲು ಕ್ರಮವಹಿಸುವುದು.

**ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ಒಗ್ಗೂಡಿಸುವಿಕೆ.**

**ತೋಟಗಾರಿಕೆ ಇಲಾಖೆ:**

18. ತೋಟಗಾರಿಕೆ ಒಗ್ಗೂಡಿಸುವಿಕೆಯಡಿ ಒಟ್ಟಾರೆ 8,36,238 ಮಾನವ ದಿನಗಳ ಸೃಜನೆಯಾಗಿದ್ದು, ಕೋಲಾರ, ರಾಮನಗರ, ಹಾಸನ, ತುಮಕೂರು, ಶಿವಮೊಗ್ಗ, ಬಳ್ಳಾರಿ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳಲ್ಲಿ ಉತ್ತಮ ಪ್ರಗತಿ ಸಾಧಿಸಿದ್ದು, ಕೊಡಗು, ಯಾದಗಿರಿ, ಧಾರವಾಡ, ಉಡುಪಿ, ಬಿಜಾಪುರ, ಮಂಡ್ಯ ಮುಂತಾದ ಜಿಲ್ಲೆಗಳಲ್ಲಿ ತೀರಾ ಕಡಿಮೆ ಪ್ರಗತಿಯಾಗಿರುತ್ತದೆ. ಈ ಹಿಂದಿನ ಸಭೆಗಳಲ್ಲಿಯೂ ಸಹ ತೋಟಗಾರಿಕೆ ಕಾಮಗಾರಿಗಳಿಗೆ ಹೆಚ್ಚಿನ ಒತ್ತು ನೀಡಲು ತಿಳಿಸಿದ್ದರೂ ಸಹ ಗಮನಾರ್ಹ ಪ್ರಗತಿ ಸಾಧಿಸದಿರುವ ಬಗ್ಗೆ ಮಾನ್ಯ ಸಚಿವರು ಅತೃಪ್ತಿ ವ್ಯಕ್ತಪಡಿಸಿದರು. ಬಿಜಾಪುರ ಜಿಲ್ಲೆಯಲ್ಲಿ ತೋಟಗಾರಿಕೆಗೆ ಹೆಚ್ಚಿನ

ಅವಕಾಶವಿದ್ದರೂ ಸಹ ಪ್ರಗತಿ ಕಡಿಮೆಯಾಗಿರುವುದನ್ನು ಗಮನಿಸಲಾಯಿತು. ಚಾಮರಾಜನಗರ, ಕಲಬುರ್ಗಿ, ಮಂಡ್ಯ, ಚಿತ್ರದುರ್ಗ, ಕೊಪ್ಪಳ, ಬೀದರ್, ಮೈಸೂರು ಜಿಲ್ಲೆಗಳಲ್ಲಿ ತೋಟಗಾರಿಕೆಗೆ ವಿಫುಲ ಅವಕಾಶವಿದ್ದು, ಹೆಚ್ಚಿನ ಪ್ರಗತಿ ಸಾಧಿಸಲು ಕ್ರಮವಹಿಸುವುದು.

ರೇಷ್ಮೆ ಇಲಾಖೆ:

19. ರೇಷ್ಮೆ ಇಲಾಖೆಯ ಒಗ್ಗೂಡಿಸುವಿಕೆ ಯೋಜನೆಯಡಿ ಒಟ್ಟಾರೆ 9,34,098 ಮಾನವ ದಿನಗಳ ಸೃಜನೆಯಾಗಿರುತ್ತದೆ. ದಕ್ಷಿಣ ಕನ್ನಡ, ಕೊಡಗು, ಉಡುಪಿ, ಯಾದಗಿರಿ ಜಿಲ್ಲೆಗಳಲ್ಲಿ ಮಾನವ ದಿನಗಳ ಸೃಜನೆ ಶೂನ್ಯವಾಗಿದ್ದು, ಶಿವಮೊಗ್ಗ, ಕೊಪ್ಪಳ, ಧಾರವಾಡ, ಉತ್ತರ ಕನ್ನಡ, ಬೆಂಗಳೂರು ಜಿಲ್ಲೆಗಳಲ್ಲಿ ತೀರ ಕಡಿಮೆ ಪ್ರಗತಿಯಾಗಿರುತ್ತದೆ. ಚಿತ್ರದುರ್ಗ ಜಿಲ್ಲೆಯಲ್ಲಿ 1,471 ಹೆಕ್ಟೇರ್ ಪ್ರದೇಶದಲ್ಲಿ ರೇಷ್ಮೆ ಬೆಳೆಯುತ್ತಿದ್ದು, 9,509 ಮಾನವ ದಿನಗಳನ್ನು ಸೃಜನೆ ಮಾಡಲಾಗಿದೆ, ಆದರೆ ಬೆಳಗಾವಿ ಜಿಲ್ಲೆಯಲ್ಲಿ 397 ಹೆಕ್ಟೇರ್ ಪ್ರದೇಶದಲ್ಲಿ ರೇಷ್ಮೆ ಬೆಳೆಯುತ್ತಿದ್ದು, 26,471 ಮಾನವ ದಿನಗಳನ್ನು ಸೃಜನೆ ಮಾಡಲಾಗಿದೆ. ಚಾಮರಾಜನಗರ ಜಿಲ್ಲೆಯಲ್ಲಿ 1,965 ಹೆಕ್ಟೇರ್ ಪ್ರದೇಶದಲ್ಲಿ ರೇಷ್ಮೆ ಬೆಳೆಯುತ್ತಿದ್ದು, 5,746 ಮಾನವ ದಿನಗಳನ್ನು ಸೃಜನೆ ಮಾಡಲಾಗಿದೆ. ಬಾಗಲಕೋಟೆ ಜಿಲ್ಲೆಯಲ್ಲಿ 507 ಹೆಕ್ಟೇರ್ ಪ್ರದೇಶದಲ್ಲಿ ರೇಷ್ಮೆ ಬೆಳೆಯುತ್ತಿದ್ದು, 47,653 ಮಾನವ ದಿನಗಳನ್ನು ಸೃಜನೆ ಮಾಡಲಾಗಿದೆ. ಹೆಚ್ಚು ರೇಷ್ಮೆ ವಿಸ್ತೀರ್ಣವಿರುವ ಜಿಲ್ಲೆಗಳಿಗಿಂತ ಕಡಿಮೆ ರೇಷ್ಮೆ ವಿಸ್ತೀರ್ಣವಿರುವ ಜಿಲ್ಲೆಗಳು ಪ್ರಗತಿ ಸಾಧಿಸಿದ್ದು, ಸಾಂಪ್ರದಾಯಿಕ ರೇಷ್ಮೆ ಜಿಲ್ಲೆಗಳ ಅಧಿಕಾರಿಗಳು ಆತ್ಮಾವಲೋಕನ ಮಾಡಿಕೊಳ್ಳಲು ಸೂಚಿಸಿದರು.

ಅರಣ್ಯ ಇಲಾಖೆ :

20. ಅರಣ್ಯ ಇಲಾಖೆ ಒಗ್ಗೂಡಿಸುವಿಕೆಯಡಿ ಒಟ್ಟು 16,64,794 ಮಾನವ ದಿನಗಳ ಸೃಜನೆಯಾಗಿದ್ದು, ರೂ.89.54ಕೋಟಿ ವೆಚ್ಚ ಭರಿಸಲಾಗಿರುತ್ತದೆ. ಅರಣ್ಯೀಕರಣ ಅನುಷ್ಠಾನದಲ್ಲಿ ಈ ಸಾಲಿನಲ್ಲಿ ಕೆಲವು ಜಿಲ್ಲೆಗಳಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸಿದ್ದರೆ ಕೆಲವು ಜಿಲ್ಲೆಗಳಲ್ಲಿ ಪ್ರಗತಿ ಆಶಾದಾಯಕವಾಗಿರುವುದಿಲ್ಲ. ಪ್ರಸ್ತುತ ಅರಣ್ಯೀಕರಣ ಕಾರ್ಯಕ್ರಮ ಅನುಷ್ಠಾನಕ್ಕೆ ಸಕಾಲವಾಗಿದ್ದರೂ ಸಹ ಕೆಲವೊಂದು ಜಿಲ್ಲೆಗಳಲ್ಲಿ ಪ್ರಗತಿ ಸಾಧಿಸದಿರುವ ಬಗ್ಗೆ ಗಮನಿಸಲಾಯಿತು. ಜಿಲ್ಲಾಮಟ್ಟದ ಇಲಾಖಾ ಮುಖ್ಯಸ್ಥರನ್ನು ಸಂಪರ್ಕಿಸಿ, ಎಲ್ಲಾ ಸರ್ಕಾರಿ ಕಟ್ಟಡಗಳ ಆವರಣಗಳಲ್ಲಿ ಗಿಡಗಳನ್ನು ನೆಡಲು ಸೂಚಿಸಿದರು.

ಕೃಷಿ ಮತ್ತು ಜಲಾನಯನ ಇಲಾಖೆ:

21. ಒಗ್ಗೂಡಿಸುವಿಕೆಯಡಿ ಒಟ್ಟಾರೆ 6,20,162 ಮಾನವ ದಿನಗಳ ಸೃಜನೆಯಾಗಿರುತ್ತದೆ. ಕೊಡಗು ಜಿಲ್ಲೆಯಲ್ಲಿ ಪ್ರಗತಿ ಶೂನ್ಯವಾಗಿದ್ದು, ಉಡುಪಿ ಜಿಲ್ಲೆಯಲ್ಲಿ ತೀರ ಕಡಿಮೆ ಪ್ರಗತಿಯಾಗಿರುತ್ತದೆ. ಕೆಲವು ಜಿಲ್ಲೆಗಳು ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ಕೃಷಿ ಮತ್ತು ಜಲಾನಯನ ಕಾಮಗಾರಿಗಳ ಅನುಷ್ಠಾನದಲ್ಲಿ ಕಡಿಮೆ ಪ್ರಗತಿ ಹೊಂದಿರುವುದನ್ನು ಅವಗಾಹಿಸಿ ಪ್ರಸಕ್ತ ಸಾಲಿನಲ್ಲಿ ಶೂನ್ಯ ಸಾಧನೆ ಹಾಗೂ ಕಡಿಮೆ ಪ್ರಗತಿ ಸಾಧಿಸಿರುವ ಜಿಲ್ಲೆಗಳು ತುರ್ತು ಕ್ರಮವಹಿಸುವುದು. ಶಿವಮೊಗ್ಗ ಜಿಲ್ಲೆಯಲ್ಲಿ ವೆಂಟೆಡ್ ಡ್ಯಾಂ, ಚೆಕ್ ಡ್ಯಾಂ ಮುಂತಾದ ಕಾಮಗಾರಿಗಳನ್ನು ತೆಗೆದುಕೊಳ್ಳುವ ಅವಕಾಶವಿದೆ, ಆದ್ದರಿಂದ ಅವಕಾಶವಿರುವ ಜಿಲ್ಲೆಗಳಲ್ಲಿ ಈ ರೀತಿಯಾದ ಕಾಮಗಾರಿಗಳಿಗೆ ಆಧ್ಯತೆ ನೀಡಿ ಪ್ರಗತಿಯನ್ನು ಹೆಚ್ಚಿಸಲು ಕ್ರಮವಹಿಸುವುದು.

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ :

22. ಬಳ್ಳಾರಿ, ಬೆಂಗಳೂರು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಶೂನ್ಯ ಪ್ರಗತಿ ಹಾಗೂ ಕಲಬುರ್ಗಿ, ಉತ್ತರಕನ್ನಡ, ಕೊಡಗು, ಚಿಕ್ಕಬಳ್ಳಾಪುರ, ಮೈಸೂರು, ಶಿವಮೊಗ್ಗ, ಉಡುಪಿ ಜಿಲ್ಲೆಗಳಲ್ಲಿ ಅತ್ಯಂತ ಕಡಿಮೆ ಮಾನವ ದಿನಗಳ ಸೃಜನೆಯಾಗಿರುತ್ತದೆ. ಆಧ್ಯತೆ ಮೇರೆಗೆ ಮಾನವ ದಿನಗಳ ಸೃಜನೆಗೆ ಕಮ್ರವಹಿಸುವುದು.

ಶಾಲಾ ಆಟದ ಮೈದಾನ :

23. ಪ್ರಸಕ್ತ ಸಾಲಿನಲ್ಲಿ ಒಟ್ಟು 1,072 ಶಾಲಾ ಆಟದ ಮೈದಾನಗಳ ಗುರಿ ಹೊಂದಿದ್ದು, ಅದರಲ್ಲಿ 374 ಆಟದ ಮೈದಾನಗಳ ಕಾಮಗಾರಿ ಪೂರ್ಣವಾಗಿದ್ದು, 698 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಈ ಹಿಂದಿನ ಸಭೆಗಳಲ್ಲಿ ತಿಳಿಸಲಾದಂತೆ ಆಟದ ಮೈದಾನ ಹಾಗೂ ಶಾಲಾ ಕಾಂಪೌಂಡ್‌ಗಳನ್ನು ಒಟ್ಟಾಗಿ ಅನುಷ್ಠಾನಿಸುವುದು. ಪ್ರತಿ ವರ್ಷ ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ ಶಾಲಾ ಆಟದ ಮೈದಾನಗಳನ್ನು ಅಭಿವೃದ್ಧಿಪಡಿಸಲು ಅವಕಾಶವಿದ್ದು, ಮುಂದಿನ ಪ್ರಗತಿ ಪರಿಶೀಲನಾ ಸಭೆಯ ಒಳಗಾಗಿ 6,022 ಗ್ರಾಮ ಪಂಚಾಯಿತಿಗಳಿಗೆ ತಲಾ ಒಂದರಂತೆ ಶಾಲಾ ಆಟದ ಮೈದಾನವನ್ನು ತೆಗೆದುಕೊಳ್ಳಲು ಕ್ರಮವಹಿಸುವುದು.

ಅಂಗನವಾಡಿ ಕಟ್ಟಡಗಳು ಹಾಗೂ ಶಾಲಾ ಶೌಚಾಲಯಗಳ ನಿರ್ಮಾಣ :

24. 2016–17 ಹಾಗೂ 2017–18 ನೇ ಸಾಲಿನಲ್ಲಿ ಒಟ್ಟು 3,000 ಅಂಗನವಾಡಿ ಕಟ್ಟಡಗಳ ನಿರ್ಮಾಣದ ಗುರಿಯಿದ್ದು, ಅದರಲ್ಲಿ 514 ಕಟ್ಟಡಗಳು ಪೂರ್ಣವಾಗಿದ್ದು, 1,286 ಕಟ್ಟಡಗಳು ಪ್ರಗತಿಯಲ್ಲಿದೆ, ಇನ್ನು 1,200 ಕಟ್ಟಡಗಳು ಪ್ರಾರಂಭವಾಗಿರುವುದಿಲ್ಲ. ಅಂಗನವಾಡಿ ಕಟ್ಟಡಗಳ ಹಾಗೂ ಶಾಲಾ ಶೌಚಾಲಯಗಳ ಪ್ರಗತಿಯ ಕುರಿತು ಜಿಲ್ಲೆಗಳಿಂದ ಸ್ವೀಕರಿಸಿದ ಅಂಕಿ ಅಂಶಗಳು,

ಸಂಬಂಧಿಸಿದ ಇಲಾಖೆಯಿಂದ ಪಡೆದ ಪ್ರಗತಿ ಮತ್ತು ಎಂ.ಐ.ಎಸ್‌ನಲ್ಲಿ ದಾಖಲಾದ ಅಂಕಿ ಅಂಶಗಳಲ್ಲಿ ವ್ಯತ್ಯಾಸವಿದ್ದು, ಮುಂದಿನ ಸಭೆಯಲ್ಲಿ ನಿಖರವಾದ ಕ್ರೂಢೀಕೃತ ಪ್ರಗತಿ ವರದಿಯನ್ನು ಮಂಡಿಸಲಾಗುವುದೆಂದು ಆಯುಕ್ತರು ಗ್ರಾಮೀಣಾಭಿವೃದ್ಧಿರವರು ತಿಳಿಸಿದರು.

ವಸತಿ:

25. ವಸತಿ ಯೋಜನೆಯ ಎಲ್ಲಾ ಫಲಾನುಭವಿಗಳಿಗೂ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಸೌಲಭ್ಯವನ್ನು ಒದಗಿಸುವುದು.

(ಕ್ರಮ: ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)

ಗ್ರಾಮ ವಿಕಾಸ ಮತ್ತು ಗ್ರಾಮೀಣ ಸಂಪರ್ಕ :

ಸುವರ್ಣ ಗ್ರಾಮ, ಗ್ರಾಮ ವಿಕಾಸ ಹಾಗೂ ಮುಖ್ಯ ಮಂತ್ರಿ ಗ್ರಾಮ ವಿಕಾಸ :

26. ಸುವರ್ಣ ಗ್ರಾಮ ಮತ್ತು ಗ್ರಾಮ ವಿಕಾಸ ಯೋಜನೆಗಳಡಿ ಮಾರ್ಚ್ 2019 ರೊಳಗೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸುವುದು.

27. ಬಾಕಿ ಇರುವ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಿ, ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸೂಚಿಸಲಾಯಿತು.

28. ಸದರಿ ಯೋಜನೆಯಡಿ ಈ ಆರ್ಥಿಕ ಸಾಲಿಗೆ ಲಭ್ಯವಿರುವ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಕಾಮಗಾರಿಗಳನ್ನು ಪೂರ್ಣಗೊಳಿಸಿದೇ ಇದ್ದಲ್ಲಿ ಮುಂದಿನ ಆರ್ಥಿಕ ಸಾಲಿಗೆ ಅನುದಾನವು ಕಡಿತಗೊಳ್ಳುವುದರಿಂದ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಕ್ರಮ ಕೈಗೊಳ್ಳುವುದು

29. ಸುವರ್ಣ ಗ್ರಾಮ, ಗ್ರಾಮ ವಿಕಾಸ ಯೋಜನೆಗಳಲ್ಲಿ ಉಳಿತಾಯವಾಗಿರುವ ಅನುದಾನ ಹಾಗೂ ಬ್ಯಾಂಕ್‌ನಲ್ಲಿರುವ ಬಡ್ಡಿ ಹಣದ ವಿವರಗಳನ್ನು ಕೂಡಲೇ ಸರ್ಕಾರದ ಗಮನಕ್ಕೆ ತರುವುದು ಮತ್ತು ಉಳಿತಾಯವಾದ ಅನುದಾನ ಬ್ಯಾಂಕ್‌ನಲ್ಲಿ ಬಂದಿರುವ ಬಡ್ಡಿ ಹಣಕ್ಕೆ ಯಾವುದೇ ಕಾಮಗಾರಿಗಳನ್ನು ಜಿಲ್ಲಾ ಪಂಚಾಯತಿ ಮಟ್ಟದಲ್ಲೇ ಅನುಮೋದಿಸಿ, ಕೈಗೊಳ್ಳಬಾರದು.

ಗ್ರಾಮೀಣ ಸಂಪರ್ಕ:

30. ನಮ್ಮ ಗ್ರಾಮ ನಮ್ಮ ರಸ್ತೆ ಮತ್ತು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಕೈಗೊಂಡ ಕಾಮಗಾರಿಗಳನ್ನು ಪ್ರತಿ ಮಾಹೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪರಿಶೀಲನೆ ಕೈಗೊಂಡು ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಕ್ರಮವಹಿಸುವುದು.

31. ನಬಾರ್ಡ್ (ಸಾಮಾನ್ಯ) 17 ಜಿಲ್ಲೆಗಳಲ್ಲಿ ಪ್ರಗತಿ ಶೂನ್ಯವಾಗಿದ್ದು, ನಬಾರ್ಡ್ (ಎಸ್‌ಡಿಪಿ) 20 ಜಿಲ್ಲೆಗಳಲ್ಲಿ ಶೂನ್ಯ ಪ್ರಗತಿ ಹೊಂದಿರುವುದನ್ನು ಗಮನಿಸಿ ಈ ಬಗ್ಗೆ ಕಳೆದ ಬಾರಿ ಪರಿಶೀಲನಾ

ಸಭೆಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಚನೆ ನೀಡಲಾಗಿದ್ದರೂ ಯಾವುದೇ ಕ್ರಮ ತೆಗೆದುಕೊಳ್ಳದಿರುವುದರ ಬಗ್ಗೆ ಅತೃಪ್ತಿಯನ್ನು ವ್ಯಕ್ತಪಡಿಸಿ ಮುಂದಿನ ಪರಿಶೀಲನಾ ಸಭೆಯ ವೇಳೆಗೆ ಪುನ: ಸೂಚನೆ ನೀಡಲು ಅವಕಾಶ ನೀಡದಂತೆ ಕ್ರಮವಹಿಸುವುದು.

32. ಸಿ.ಎಂ.ಜಿಎಸ್ ವೈ (3054)/ ರಸ್ತೆ ಅಭಿವೃದ್ಧಿ ಯೋಜನೆಯಡಿ ಕಳೆದ ಸಾಲಿನಲ್ಲಿ ವಿಶೇಷ ಮಂಜೂರಾತಿ ಪಡೆದು ಆರಂಭವಾಗದಿರುವ ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು ಕೈಬಿಡಲು ಕಡ್ಡಾಯವಾಗಿ ಕ್ರಮ ಕೈಗೊಳ್ಳುವುದು. ಕೈ ಬಿಟ್ಟ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬಿಲ್ ಪಾವತಿಗೆ ಅವಕಾಶವಿರುವುದಿಲ್ಲ. ಹಾಗೊಂದು ವೇಳೆ ಬಿಲ್ ಪಾವತಿಗೆ ಮಂಡಿಸಿದಲ್ಲಿ, ಸಂಬಂಧಿಸಿದವರನ್ನು ನೇರ ಜವಾಬ್ದಾರರನ್ನಾಗಿಸಿ ಶಿಸ್ತು ಕ್ರಮ ಜರುಗಿಸಲಾಗುವುದು.

(ಕ್ರಮ: ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)

<u>ಪಂಚಾಯತ್ ರಾಜ್ ವಿಷಯಗಳು:</u>

33. ಹೊಸದಾಗಿ ರಚನೆಯಾಗಿರುವ ತಾಲ್ಲೂಕುಗಳಲ್ಲಿ ತಾಲ್ಲೂಕು ಪಂಚಾಯತ್ ಕಚೇರಿಗಳನ್ನು ಪ್ರಾರಂಭಿಸುವ ಕುರಿತಂತೆ, ಆದಷ್ಟು ಲಭ್ಯವಿರುವ ಸರ್ಕಾರಿ ಕಟ್ಟಡಗಳು ಅಥವಾ ಹಾಲಿ ಇರುವ ಗ್ರಾಮ ಪಂಚಾಯತಿ ಕಟ್ಟಡಗಳನ್ನು ಗುರುತಿಸಿ, ಸರ್ಕಾರಿ ಕಟ್ಟಡಗಳು ಲಭ್ಯವಿಲ್ಲದ ಕಡೆ ಸೂಕ್ತ ಬಾಡಿಗೆ ಕಟ್ಟಡಗಳನ್ನು ಗುರುತಿಸಿ ಕೂಡಲೇ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಅಗತ್ಯ ಕ್ರಮ ವಹಿಸುವುದು.

34. ಜಿಲ್ಲಾ ಪಂಚಾಯತಿ ಅಭಿವೃದ್ಧಿ ಅನುದಾನದಡಿ 8 ಜಿಲ್ಲೆಗಳಿಂದ ಮಾತ್ರ ಅನುಮೋದಿತ ಕ್ರಿಯಾ ಯೋಜನೆ ಸ್ವೀಕೃತವಾಗಿದ್ದು, ಉಳಿದ 22 ಜಿಲ್ಲೆಗಳಿಂದ ಕ್ರಿಯಾ ಯೋಜನೆ ಬಾಕಿಯಿದ್ದು ಈಗಾಗಲೇ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಆರು ತಿಂಗಳು ಮುಕ್ತಾಯಗೊಂಡಿದ್ದು ಕೂಡಲೇ ಕ್ರಿಯಾ ಯೋಜನೆಗಳನ್ನು ಸಲ್ಲಿಸಲು ಕ್ರಮ ವಹಿಸಲು ತಿಳಿಸಲಾಯಿತು.

35. ತಾಲ್ಲೂಕು ಪಂಚಾಯತಿ ಅಭಿವೃದ್ಧಿ ಅನುದಾನದಡಿ 35 ತಾಲ್ಲೂಕು ಪಂಚಾಯತಿಗಳಿಂದ ಮಾತ್ರ ಅನುಮೋದಿತ ಕ್ರಿಯಾ ಯೋಜನೆ ಸ್ವೀಕೃತವಾಗಿರುತ್ತದೆ. ಕೂಡಲೇ ಕ್ರಿಯಾ ಯೋಜನೆಗಳನ್ನು ಸಲ್ಲಿಸಲು ಕ್ರಮ ವಹಿಸುವುದು.

(ಕ್ರಮ: ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)

36. ಗ್ರಾಮ/ತಾಲ್ಲೂಕು/ಜಿಲ್ಲಾ ಪಂಚಾಯತಿಗಳಲ್ಲಿ ಎಲ್ಲಾ ಕ್ರಿಯಾಯೋಜನೆಗಳ ಅನುಮೋದನೆಗೆ ನಿಗದಿತ ದಿನಾಂಕವನ್ನು ಗೊತ್ತುಪಡಿಸಿ, ನಿಗದಿತ ದಿನಾಂಕದೊಳಗೆ ಕ್ರಿಯಾ ಯೋಜನೆಗೆ ಅನುಮೋದನೆ ನೀಡದಿದ್ದಲ್ಲಿ ಗ್ರಾಮ ಪಂಚಾಯತಿ ಕ್ರಿಯಾ ಯೋಜನೆಯನ್ನು ತಾಲ್ಲೂಕು

36. ಗ್ರಾಮ/ತಾಲ್ಲೂಕು/ಜಿಲ್ಲಾ ಪಂಚಾಯತಿಗಳಲ್ಲಿ ಎಲ್ಲಾ ಕ್ರಿಯಾಯೋಜನೆಗಳ ಅನುಮೋದನೆಗೆ ನಿಗದಿತ ದಿನಾಂಕವನ್ನು ಗೊತ್ತುಪಡಿಸಿ, ನಿಗದಿತ ದಿನಾಂಕದೊಳಗೆ ಕ್ರಿಯಾ ಯೋಜನೆಗೆ ಅನುಮೋದನೆ ನೀಡದಿದ್ದಲ್ಲಿ ಗ್ರಾಮ ಪಂಚಾಯತಿ ಕ್ರಿಯಾ ಯೋಜನೆಯನ್ನು ತಾಲ್ಲೂಕು ಪಂಚಾಯತಿಯಲ್ಲಿ, ತಾಲ್ಲೂಕು ಪಂಚಾಯತ್ ಕ್ರಿಯಾ ಯೋಜನೆಯನ್ನು ಜಿಲ್ಲಾ ಪಂಚಾಯತಿಯಲ್ಲಿ ಹಾಗೂ ಜಿಲ್ಲಾ ಪಂಚಾಯತಿ ಕ್ರಿಯಾ ಯೋಜನೆಯನ್ನು ಸರ್ಕಾರದ ಮಟ್ಟದಲ್ಲಿ ಅನುಮೋದಿಸಲು ಅನುವಾಗುವಂತೆ ಸರ್ಕಾರದ ಸುತ್ತೋಲೆಯನ್ನು ಹೊರಡಿಸಲು ಕ್ರಮವಹಿಸುವುದು.

(ಕ್ರಮ: ನಿರ್ದೇಶಕರು, ಪಂಚಾಯತ್ ರಾಜ್ I & II)

37. ಮಿಷನ್ ಅಂತ್ಯೋದಯದಡಿ 4714 ಗ್ರಾಮ ಪಂಚಾಯತಿಗಳ ಸರ್ವೆ ಮಾಹಿತಿಯನ್ನು GPDP App ನಲ್ಲಿ ಅಪ್‌ಲೋಡ್ ಮಾಡಲಾಗಿದ್ದು ಉಳಿದ 1,508 ಗ್ರಾಮ ಪಂಚಾಯತಿಗಳ ಸರ್ವೆ ಮಾಹಿತಿಯನ್ನು ಅಪ್‌ಲೋಡ್ ಮಾಡಲು ಕ್ರಮ ವಹಿಸುವುದು.

38. ನಮ್ಮ ಗ್ರಾಮ ನಮ್ಮ ಯೋಜನೆಯಡಿಯಲ್ಲಿ ಇದುವರೆವಿಗೂ ಕೇವಲ 1484 ಗ್ರಾಮ ಪಂಚಾಯತಿಗಳಲ್ಲಿ ನಡೆದಿರುವ ಗ್ರಾಮ ಸಭೆಗಳ ಷೆಡ್ಯೂಲ್ ವಿವರಗಳನ್ನು ಮಾತ್ರ ಪಂಚತಂತ್ರ ತಂತ್ರಾಂಶದಲ್ಲಿ ಇಂದೀಕರಿಸಲಾಗಿದ್ದು, ಉಳಿದ ಗ್ರಾಮ ಪಂಚಾಯತಿಗಳ ಷೆಡ್ಯೂಲ್ ವಿವರಗಳನ್ನು ಇಂಧಿಕರಿಸಲು ಅಗತ್ಯ ಕ್ರಮವಹಿಸುವುದು.

39. ತೆರಿಗೆ ಮತ್ತು ವಸೂಲಾತಿ ಬಗ್ಗೆ (DCB-Demand Collections and Balance) ವಿಜಯಪುರ, ಚಾಮರಾಜನಗರ, ಕಲಬುರ್ಗಿ, ಬೀದರ್ ಹಾಗೂ ಯಾದಿಗೀರ ಜಿಲ್ಲೆಗಳಲ್ಲಿ ಶೇ. 3 ಕ್ಕಿಂತ ಕಡಿಮೆ ಸಂಗ್ರಹ ಮಾಡಿರುವುದು ಅತ್ಯಂತ ನಿರಾಶಾದಾಯಕವಾಗಿರುತ್ತದೆ. ತೆರಿಗೆ, ವಸೂಲಾತಿ ವಿಷಯದಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಿ ಕ್ರಮ ಕೈಗೊಳ್ಳುವುದು.

40. ಕಳೆದ ನಾಲ್ಕು ವರ್ಷಗಳಿಂದ ತೆರಿಗೆ ಪರಿಷ್ಕರಣೆಯಾಗದ ಗ್ರಾಮ ಪಂಚಾಯತಿಗಳಲ್ಲಿ ತೆರಿಗೆ ಪರಿಷ್ಕರಣೆ ಮಾಡಲು ಅಗತ್ಯ ಕ್ರಮ ವಹಿಸುವುದು.

41. ಪ್ರತಿ ತಿಂಗಳ 10 ನೇ ತಾರೀಖಿನೊಳಗೆ ಪಂಚತಂತ್ರ ತಂತ್ರಾಂಶದ Bank Reconciliation Statement ನಲ್ಲಿ ಮಾಹಿತಿಯನ್ನು ಕಡ್ಡಾಯವಾಗಿ ಅಳವಡಿಸುವುದು.

(ಕ್ರಮ: ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)

ಡಿ.ಎಸ್.ಎಸ್ ತಂತ್ರಾಂಶದಲ್ಲಿ ಪ್ರಗತಿ ವಿವರ:

42. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಜಿಲ್ಲಾ ವಲಯ ಕಾರ್ಯಕ್ರಮಗಳ ಪ್ರಗತಿ ವಿವರಗಳನ್ನು ಡಿಎಸ್ಎಸ್ ತಂತ್ರಾಂಶದಲ್ಲಿ ಅಳವಡಿಸಲು ಈ ಹಿಂದಿನ ಸಭೆಗಳಲ್ಲಿ, ವೀಡಿಯೋ ಸಂವಾದಗಳಲ್ಲಿ ಹಾಗೂ ಹಲವಾರು ಪತ್ರಗಳ ಮೂಲಕ ಪದೇ ಪದೇ ತಿಳಿಸಲಾಗಿದ್ದರೂ ಜಿಲ್ಲಾವಲಯ ಯೋಜನೆಗಳ ಪ್ರಗತಿ ವಿವರಗಳನ್ನು ಸಮರ್ಪಕವಾಗಿ ಇಂದೀಕರಿಸದೇ ಟಿ.ಎನ್.ಎಂ.ಸಿ. ವೆಚ್ಚ ಹಾಗೂ ಡಿ.ಎಸ್ಎಸ್ ವೆಚ್ಚದಲ್ಲಿ ಸುಮಾರು ರೂ. 816 ಕೋಟಿಗಳಷ್ಟು ವ್ಯತ್ಯಾಸ ಕಂಡುಬರುತ್ತಿರುವುದರ ಬಗ್ಗೆ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರು ತೀವ್ರ ಅಸಮಾಧಾನ ವ್ಯಕ್ತಪಡಿಸಿ ಸದರಿ ವಿಷಯದಲ್ಲಿ ಮುಂದಿನ ಸಭೆಯ ವೇಳೆ ಯಾವುದೇ ಕಾರಣಗಳನ್ನು ಹೇಳದೇ, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ವೈಯಕ್ತಿಕ ಗಮನ ಹರಿಸಿ ಸದರಿ ತಂತ್ರಾಂಶದಲ್ಲಿ ಜಿಲ್ಲಾ ವಲಯ ಕಾರ್ಯಕ್ರಮಗಳ ಪ್ರಗತಿ ವಿವರಗಳನ್ನು ಇಂದೀಕರಿಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದರು.

(ಕ್ರಮ: ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)

ಮೇಲ್ಕಂಡ ಎಲ್ಲಾ ಅಂಶಗಳ ಮೇಲೆ ಅಗತ್ಯ ಕ್ರಮ ಕೈಗೊಂಡು ಅನುಪಾಲನಾ ವರದಿಯನ್ನು ನಡವಳಿ ತಲುಪಿದ ಒಂದು ವಾರದೊಳಗೆ ಸಲ್ಲಿಸಲು ಎಲ್ಲಾ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

KRISHNA BYREGOWDA
Minister for Rural Development & Panchayat Raj
Law and Parliamentary Affairs

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ.

ಸಂಖ್ಯೆ: ಗ್ರಾಅಪ/ 82 /ಯೋಉಮಾ/2018 ದಿನಾಂಕ: 05.11.2018

ಇವರಿಗೆ :

1. ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
ಸಂಬಂಧಪಟ್ಟ ಆಯುಕ್ತರು/ನಿರ್ದೇಶಕರು ಜಿಲ್ಲೆಗಳಿಂದ ಅನುಪಾಲನಾ ವರದಿಯನ್ನು ಪಡೆದು ಕ್ರೋಢೀಕೃತ ವರದಿಯನ್ನು ಮುಂದಿನ ಸಭೆಗೆ ಸಲ್ಲಿಸುವುದು.
2. ಆಯುಕ್ತರು, ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ.
3. ಆಯುಕ್ತರು, ಕ.ಗ್ರಾ.ನೀ.ಸ. & ನೈರ್ಮಲ್ಯ ಇಲಾಖೆ.
4. ನಿರ್ದೇಶಕರು, ಪಂಚಾಯತ್ ರಾಜ್– 1.
5. ನಿರ್ದೇಶಕರು, ಪಂಚಾಯತ್ ರಾಜ್–2.

6. ನಿರ್ದೇಶಕರು, ಗ್ರಾಮ ವಿಕಾಸ.
7. ನಿರ್ದೇಶಕರು, ಇ–ಆಡಳಿತ.
8. ಆಂತರಿಕ ಆರ್ಥಿಕ ಸಲಹೆಗಾರರು.
9. ಮುಖ್ಯ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ.
10. ಮುಖ್ಯ ಇಂಜಿನಿಯರ್, ಪಂ.ರಾಜ್ ಇಂ.ಇಲಾಖೆ, ಬೆಂಗಳೂರು.
11. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ.
12. ಅಪರ ನಿರ್ದೇಶಕರು, ಎಸ್.ಬಿ.ಎಮ್.

ಪ್ರತಿ ಮಾಹಿತಿಗಾಗಿ:–

1. ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂಚಾಯತ್ ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.